ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 16/3/21

» ಮೊದಲ ಪುಟದಿಂದ

2006ರಲ್ಲಿ ಈ ಸಮಿತಿಯು ಹಾಡಿಗೆ ಕತ್ತರಿ ಪ್ರಯೋಗಿಸುವಂತೆ ತನ್ನ ವರದಿ ಸಲ್ಲಿಸಿತ್ತು. ಇದಕ್ಕೆ ತೀವ್ರ ವಿರೋಧ ವ್ಯಕ್ತವಾದಾಗ ಆ ವಿಚಾರವನ್ನು ಕೈಬಿಡಲಾಯಿತು. ತದನಂತರ 2016ರಲ್ಲಿ ಸಿದ್ದರಾಮಯ್ಯ ಅವರ ಸರಕಾರ ನಾಡಗೀತೆಯ ಯಾವುದೇ ಸಾಲುಗಳನ್ನು ತೆಗೆಯದೆ, ಪೂರ್ಣವಾಗಿ ಉಳಿಸಿಕೊಳ್ಳಲು ತೀರ್ಮಾನಿಸಿತು. ಈಗಿನ ಕನ್ನಡ ಮತ್ತು ಸಂಸ್ಕೃತಿ ಸಚಿವರು ಮತ್ತೆ ಅದಕ್ಕೆ ಕತ್ತರಿ ಪ್ರಯೋಗಿಸುವ ಮಾತುಗಳನ್ನಾಡುತ್ತಿರುವುದು ವಿವಾದ ಸೃಷ್ಟಿಸಿದೆ. ಹೀಗೆ ಆಗಾಗ ಕುವೆಂಪು ಗೀತೆಯ ಬಗ್ಗೆ ವಿವಾದ ಸೃಷ್ಟಿಸುವುದೇಕೆ? ಇಂಥ ಪ್ರಯತ್ನಗಳು ಇಲ್ಲಿಗೇ ಕೊನೆಯಾಗಲಿ ಎನ್ನುವುದು ಜನಾಭಿಪ್ರಾಯವಾಗಿದೆ.

# ನಾಡಗೀತೆ ತಿರುಚುವ ಯತ್ನ ಇಲ್ಲಿಗೇ ನಿಲ್ಲಿ

## ಕುವೆಂಪು ಗೀತೆಗೆ ಕತ್ತರಿ ಹಾಕುವ ಅಧಿಕಾರ ಕೊಟ್ಟಿದ್ದ್ಯಾರು?

ವಿಕ ಸುದ್ದಿಲೋಕ ಬೆಂಗಳೂರು

ಕನ್ನಡ ಮತ್ತು ಕರ್ನಾಟಕದ ಅಸ್ಮಿತೆಯಾಗಿರುವ ರಾಷ್ಟ್ರಕವಿ ಕುವೆಂಪು ವಿರಚಿತ 'ಜೈ ಭಾರತ ಜನನಿಯ ತನುಜಾತೆ' ಹಾಡನ್ನು ಆಡಳಿತಾರೂಢರು ತಮಗೆ ಬೇಕಾದಂತೆ ಕತ್ತರಿಸಲು ನಡೆಸುವ ಪ್ರಯತ್ನವನ್ನು ತಕ್ಷಣವೇ ನಿಲ್ಲಿಸಬೇಕು ಎಂಬ ಪ್ರಬಲ ಆಗ್ರಹ ಸಾರ್ವಜನಿಕ ವಲಯದಿಂದ ವ್ಯಕ್ತವಾಗಿದೆ.



ನಾಡಗೀತೆಗೆ



ಪ್ರಸಕ್ತ ಸಂಗೀತವೂ ಸೇರಿ ಸುಮಾರು ಐದಾರು ನಿಮಿಷಗಳಷ್ಟು ದೀರ್ಘವಾಗಿರುವ ಹಾಡಿನ ಅವಧಿಯನ್ನು ಕಡಿಮೆ ಮಾಡಲು ತಜ್ಞರ ಸಭೆ ಕರೆಯುವುದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಅರವಿಂದ ಲಿಂಬಾವಳಿ ಪ್ರಕಟಿಸಿದ್ದರು. ಅವಧಿ ಕಡಿಮೆ ಮಾಡುವ ಹೆಸರಿನಲ್ಲಿ ಕತ್ತರಿ ಹಾಕುವ ಪ್ರಯತ್ನ ಮಾಡಬೇಡಿ, ಇದು ಕವಿಗೆ ಮಾಡುವ ಅಪಮಾನ ಮತ್ತು ಹಾಡಿನ ವಿಕೃತಿಗೆ ಕಾರಣವಾಗುತ್ತದೆ ಎಂಬ ಎಚ್ಚರಿಕೆಯ ಧ್ವನಿ ಕೇಳಿಬಂದಿದೆ.

ಕುವೆಂಪು ಅವರು ಇದು ನಾಡಗೀತೆಯಾಗಲಿ ಎಂಬ ಉದ್ದೇಶದಿಂದ ಬರೆದಿಲ್ಲ. ಸರಕಾರವೇ ಅದನ್ನು ನಾಡಗೀತೆಯಾಗಿ ಆರಿಸಿ, ಈಗ ಮನಸ್ಸಿಗೆ ಬಂದಂತೆ ಕತ್ತರಿಸುವುದು ಘೋರ ಅನ್ಯಾಯ. ಅದು ನಾಡಗೀತೆಯ ಅವಧಿಗೆ ಹೊಂದಿಕೊಳ್ಳುವುದಿಲ್ಲ ಎಂದಾದರೆ ಹಾಡನ್ನೇ ಅದರ ಪಾಡಿಗೆ ಬಿಟ್ಟು ಬಿಡಿ, ನಾಡಗೀತೆ ಹೆಸರಿನಲ್ಲಿ 'ಕವಿ ಜೀವಂತವಾಗಿಲ್ಲದ ಕಾಲದಲ್ಲಿ' ಅದನ್ನು ತಿರುಚುವ ಅಧಿಕಾರ ಕೊಟ್ಟವರ್‍ಯಾರು ಎಂದು ಹಲವು ಪ್ರಜ್ಞಾವಂತರು ಖಾರವಾಗಿ ಪ್ರಶ್ನಿಸಿದ್ದಾರೆ.

2004ರಲ್ಲಿ ನಾಡಗೀತೆಯಾಗಿ ಘೋಷಣೆಯಾದ ಬಳಿಕ, 2006ರಲ್ಲಿ ಈ ನಾಡಗೀತೆ ಹಾಡುವ ಸಮಯ ತುಂಬಾ ದೀರ್ಘವಾಗಿದೆ, ಹೀಗಾಗಿ ಸಭೆ, ಸಮಾರಂಭಗಳಲ್ಲಿ ವಯಸ್ಸಾದವರು, ಅನಾರೋಗ್ಯ ಪೀಡಿತರು, ವಿಶೇಷಚೇತನರು ಅಷ್ಟು ಹೊತ್ತು ಎದ್ದು ನಿಲ್ಲುವುದು ಕಷ್ಟವಾಗುತ್ತದೆ. ಆದ್ದರಿಂದ ನಾಡಗೀತೆಯನ್ನು ಸಂಕ್ಷಿಪ್ತಗೊಳಿಸಬೇಕು ಎಂಬ ಬಗ್ಗೆ ಸಲಹೆಗಳು ವ್ಯಕ್ತವಾದವು. ಆ ವೇಳೆ ಕವಿ ಚನ್ನವೀರ ಕಣವಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು.

ವಯಸ್ಸಾದವರಿಗೆ ನಾಡಗೀತೆಯ ದೀರ್ಘ ಅವಧಿಯಲ್ಲಿ ನಿಂತುಕೊಳ್ಳುವುದು ಕಷ್ಟ ಎನ್ನುವುದು ಕಡಿತಕ್ಕೆ ನೀಡುವ ಸಬೂಬು. ಆದರೆ, ಹೀಗೆ ನಿಂತುಕೊಳ್ಳಲೇಬೇಕು ಎಂಬುದು ಕಡ್ಡಾಯ ಯಾಕೆ? ಈಗಲೂ ಹಿರಿಯರು, ವಿಕಲಚೇತನರಿಗೆ ಕುಳಿತುಕೊಂಡೇ ಕೇಳಲು ಅವಕಾಶ ಇದೆ. ಅದನ್ನು ಯಾರಿಗೆ ಅಸಾಧ್ಯವೋ ಅವರಿಗೆ ವಿಸ್ತರಿಸಲಿ. ನಾಡಿನ ಬಗ್ಗೆ, ಗೀತೆಯ ಬಗ್ಗೆ ಪ್ರೀತಿ, ಅಭಿಮಾನ ಹೃದಯದಲ್ಲಿರಲಿ. ಆದರೆ ನಿಲ್ಲುವ-ಕೂರುವ ವಿಚಾರದಲ್ಲಿ ಅಲ್ಲ ಎನ್ನುವುದು ಎಲ್ಲರ ಅಭಿಪ್ರಾಯ.

ಕುವೆಂಪು ಅವರ ಗೀತೆಯನ್ನು ಕತ್ತರಿಸುವುದು ಬೇಡ. ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಇದು ಸುದೀರ್ಘ ಗೀತೆ ಎನಿಸಿದರೆ ಬೇರೆಯೇ ಹಾಡು ಬರೆಸಿಕೊಳ್ಳಲಿ. ಸಮಾರಂಭಗಳ ಹಂಗಿಲ್ಲದೆ ಜನಜನಿತವಾಗಿರುವ ಹಾಡಿನ ಮೂಲ ಸ್ವರೂಪಕ್ಕೆ ಯಾವುದೇ ರೀತಿ ಚ್ಯುತಿ ತರಬಾರದು. ಈಗ ನಮ್ಮ ಜೊತೆ ಇಲ್ಲದ ಕವಿಯ ಪದ್ಯವನ್ನು ಮಾರ್ಪಾಡು ಮಾಡುವುದು, ಕತ್ತರಿಸುವುದು ಸರಿಯಲ್ಲ. ಕವಿಯ ಅನುಮತಿ ಇಲ್ಲದೆ ಅಥವಾ ಕುಟುಂಬದವರ ಅನುಮತಿ ಪಡೆಯದೆ ಯಾವುದೇ ಬದಲಾವಣೆ ಮಾಡುವುದು ಸೂಕ್ತವಲ್ಲ ಎಂದು ಹಲವು ಸಾಹಿತಿಗಳು, ಸಂಗೀತಗಾರರು ಅಭಿಪ್ರಾಯಿಸಿದ್ದಾರೆ.